# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 228
2) ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು)
3) ಉತ್ತರಿಸುವ ದಿನಾಂಕ : 10-12-2018
4) ಉತ್ತರಿಸಬೇಕಾದ ಸಚಿವರು : ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆಯ ಹೆಜಮಾಡಿಕೋಡಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಮೀನುಗಾರಿಕೆ ಬಂದರು ಕಾಮಗಾರಿ ಪ್ರಾರಂಭಕ್ಕೆ ವಿಳಂಬವಾಗಲು ಕಾರಣವೇನು; | ಉಡುಪಿಯ ಹೆಜಮಾಡಿ ಕೋಡಿಯಲ್ಲಿ ನೂತನ ಬಂದರು ನಿರ್ಮಾಣಕ್ಕೆ ಅಗತ್ಯ ಪೂರ್ವಭಾವಿ ಕ್ರಮಗಳನ್ನು ಕೈಗೊಂಡು ರೂ.138.60 ಕೋಟಿಗಳ ಅಂದಾಜು ವೆಚ್ಚದಲ್ಲಿ ಬಂದರು ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಕೇಂದ್ರ ಸರ್ಕಾರದ ದಿನಾಂಕ: 13-08-2018ರ ಪತ್ರದಲ್ಲಿ ಮಂಜೂರಾತಿ ನೀಡಲಾಗಿದೆ.<br><br>ಸದರಿ ಯೋಜನೆಯನ್ನು ಅನುಮೋದಿಸುವ ಪೂರ್ವದಲ್ಲಿ ಅಗತ್ಯವಿರುವ ಅಧ್ಯಯನಗಳನ್ನು ವಿವಿಧ ಸಂಸ್ಥೆಗಳಿಂದ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಸಮಗ್ರ ಪ್ರಸ್ತಾವನೆ ಸಲ್ಲಿಸಬೇಕಾಗುತ್ತದೆ ಹಾಗೂ ಕೇಂದ್ರ ಸರ್ಕಾರ ಕೋರಿದ ಹೆಚ್ಚುವರಿ ಮಾಹಿತಿಗಳನ್ನು ನೀಡಿದ ನಂತರ ಮಂಜೂರಾತಿ ದೊರಕಿರುತ್ತದೆ.<br><br>ಮುಂದುವರೆದು, ಸದರಿ ಯೋಜನೆಯ ಅನುಷ್ಠಾನಕ್ಕೆ ಅವಶ್ಯವಿರುವ ಜಮೀನನ್ನು ಕಂದಾಯ ಇಲಾಖೆಯಿಂದ ಮೀನುಗಾರಿಕೆ ಇಲಾಖೆಗೆ ಹಸ್ತಾಂತರಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುವುದರಿಂದ ಕಾಮಗಾರಿ ಪ್ರಾರಂಭಿಸಲು ವಿಳಂಬವಾಗುತ್ತಿದೆ. |
| ಆ) | ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನ ಎಷ್ಟು; ಬಿಡುಗಡೆಯಾದ ಅನುದಾನ ಎಷ್ಟು; | ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲಿನ ಅನುದಾನದ ವಿವರವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ. |

| ಕ್ರ. ಸಂ. | ಇಲಾಖೆಯ ಹೆಸರು | ಯೋಜನೆಯ ಹೆಸರು | ಮೊಬಗಲು (ರೂ.ಲಕ್ಷಗಳಲ್ಲಿ) ಹಾಗೂ ಶೇಕಡಾವಾರು ಅನುದಾನದ ಪಾಲು |
|---|---|---|---|
| 1. | ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆ, ಕೃಷಿ ಮಂತ್ರಾಲಯ, ನವದೆಹಲಿ. | ನೀಲಿಕ್ರಾಂತಿ | 3465.00 (ಶೇ.25) |
| 2. | ಮಿನಿಸ್ಟರಿ ಆಫ್ ಶಿಪ್ಪಿಂಗ್, ಕೇಂದ್ರ ಸರ್ಕಾರ. | ಸಾಗರಮಾಲಾ | 3465.00 (ಶೇ.25) |
| 3. | ರಾಜ್ಯ ಸರ್ಕಾರ | ರಾಜ್ಯವಲಯದ ಅನುದಾನ | 6930.00 (ಶೇ.50) |

ಹಾಗೆಯೇ, ಸದರಿ ಯೋಜನೆಗೆ ಕೇಂದ್ರ ಸರ್ಕಾದಿಂದ ಪ್ರಥಮ ಕಂತಿನ ಅನುದಾನವಾಗಿ ರೂ.13.86 ಕೋಟಿಗಳು ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾಗಿದೆ.

| | | |
|---|---|---|
| ಇ) | ಬಂದರು ರಚನೆಗೆ ಎಷ್ಟು ಎಕರೆ ಭೂಮಿಯನ್ನು ಗುರುತಿಸಲಾಗಿದೆ; ಗುರುತಿಸಲಾದ ಭೂಮಿಯು ಸರ್ಕಾರಿ / ಖಾಸಗಿಯದೆ; (ವಿವರ ನೀಡುವುದು) | ಉದ್ದೇಶಿತ ಮೀನುಗಾರಿಕೆ ಬಂದರನ್ನು ನಿರ್ಮಿಸಲು ಒಟ್ಟಾರೆ 37 ಎಕರೆ ಜಮೀನನ್ನು ಗುರುತಿಸಲಾಗಿದ್ದು, ಅದರಲ್ಲಿ ಸರ್ಕಾರ ಮತ್ತು ಖಾಸಗಿ ಒಡೆತನದ ಭೂಮಿ ಇರುತ್ತದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಈ) | ಬಂದರು ರಚನೆಗೆ ಪ್ರಾರಂಭಿಕ ಅಂದಾಜು ವೆಚ್ಚ ಎಷ್ಟು; ಪ್ರಸ್ತುತ ಹೆಚ್ಚುವರಿಯಾದ ಅಂದಾಜು ಎಷ್ಟು; (ವಿವರ ನೀಡುವುದು) | ಹೆಜಮಾಡಿಕೋಡಿಯಲ್ಲಿ ಮೀನುಗಾರಿಕೆ ಬಂದರನ್ನು ನಿರ್ಮಿಸಲು ಈ ಹಿಂದೆ ರೂ.122.59 ಕೋಟಿಗಳ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿತ್ತು.<br><br>ಆದರೆ, ಕೇಂದ್ರೀಯ ಸಂಸ್ಥೆಗಳಾದ ಸಿ.ಐ.ಸಿ.ಇ.ಎಫ್. (Central Institute of Coastal Engineering for Fishery), ಬೆಂಗಳೂರು ಮತ್ತು ಸಿ.ಡಬ್ಲ್ಯೂ.ಪಿ.ಆರ್.ಎಸ್. (Central Water and Power Research Station), ಪುಣೆ ಇವರುಗಳು ನೀಡಿದ ನಕ್ಷೆಗಳನುಸಾರ ಕಾರ್ಯನಿರ್ವಾಹಕ ಅಭಿಯಂತರರು, ಬಂದರು ಮತ್ತು ಮೀನುಗಾರಿಕೆ ವಿಭಾಗ, ಉಡುಪಿ ಇವರು 2016-17ನೇ ಸಾಲಿನ ಎಸ್.ಆರ್. ದರಗಳಂತೆ ಸಿದ್ಧಪಡಿಸಿದ ಅಂದಾಜು ಪಟ್ಟಿಯು ರೂ.138.60 ಕೋಟಿಗಳಾಗಿರುತ್ತದೆ.<br><br>ಪ್ರಸ್ತುತ, ಹೆಚ್ಚುವರಿಯಾದ ಅಂದಾಜು ಮೊತ್ತವು ರೂ.16.01 ಕೋಟಿಗಳಾಗಿರುತ್ತದೆ. |
| ಉ) | ಹೆಜಮಾಡಿ ಬಂದರಿನಿಂದ ಯಾವ ಯಾವ ಭಾಗದ ಜನರಿಗೆ ಮೀನುಗಾರಿಕೆಗೆ ಸಹಾಯವಾಗುತ್ತದೆ; ಈ ಪ್ರಸ್ತಾವನೆ ಯಾವಾಗ ಸಿದ್ಧಪಡಿಸಲಾಗುತ್ತದೆ; (ವಿವರ ನೀಡುವುದು) | ಹೆಜಮಾಡಿ ಕೋಡಿಯಲ್ಲಿ ಉದ್ದೇಶಿತ ಬಂದರು ನಿರ್ಮಾಣದಿಂದ ಈ ಕೆಳಗಿನ ಗ್ರಾಮದ ಜನರಿಗೆ ಸಹಾಯವಾಗುತ್ತದೆ.<br><br>ಉಡುಪಿ ಜಿಲ್ಲೆಯ ಕಾಪು ತಾಲ್ಲೂಕಿನ ಪೊಲಿಪು, ಕಾಪು, ಮೂಳೂರು, ಉಚ್ಚಿಲ, ಬಡಾ ಎರ್ಮಾಳು, ತೆಂಕ ಎರ್ಮಾಳು, ಕಾಡಿಪಟ್ನ (ಪಡುಬಿದ್ರಿ), ನಡಿಪಟ್ನ (ಪಡುಬಿದ್ರಿ), ಕನ್ನಂಗಾರು, ಹೆಜಮಾಡಿ, ಆಜಿಮಟ್ಟು, ಮಟ್ಟುಪಟ್ನ, ಗುಂಡಿ, ಕನ್ನಗುಂಡಿ, ಪಲ್ಲಿಮಾರು,<br><br>ದಕ್ಷಿಣ ಕನ್ನಡ ಜಿಲ್ಲೆಯ ದೊಡ್ಡಕೊಪ್ಪಲ, ಮಿತ್ರಪಟ್ನ (ಮುಕ್ಕಾ), ಲಚ್ಚಿಲ್ (ಸಸಿಹಿತ್ಲು), ಕದಿಕೆ (ಸಸಿಹಿತ್ಲು), ಚೊಹರಾ (ಸಸಿಹಿತ್ಲು), ಚಿತ್ರಾಪುರ, ಒಡೆಯಬೆಟ್ಟು, ಮಾನಂಪಾಡಿ, ಬಪ್ಪನಾಡು, ಚರಂತಿಪೇಟೆ ಹಾಗೂ ಕೋಟೆಕೊಪ್ಪಲ.<br><br>ಪ್ರಸ್ತುತ ಮೇಲೆ ತಿಳಿಸಿದ ಗ್ರಾಮಗಳ ಮೀನುಗಾರರಿಗೆ, ದೋಣಿಗಳ ಮಾಲೀಕರಿಗೆ, ಮೀನುಗಾರಿಕೆ ಅವಲಂಬಿತ ಇತರೇ ಕುಟುಂಬಗಳಿಗೆ ಅನುಕೂಲವಾಗುತ್ತದೆ. ಯಾವುದೇ ಪ್ರತ್ಯೇಕ ಪ್ರಸ್ತಾವನೆ ಸಿದ್ಧಪಡಿಸುತ್ತಿಲ್ಲ. |

| | | |
|---|---|---|
| ಊ) | ಬಂದರು ಕಾಮಗಾರಿ ಪೂರ್ಣಗೊಳ್ಳಲು ನಿಗದಿಪಡಿಸಿದ ಅವಧಿ ಎಷ್ಟು; ಗುತ್ತಿಗೆ ನೀಡಲಾಗಿದೆಯೇ; ಅದು ಯಾವ ಹಂತದಲ್ಲಿದೆ; (ವಿವರ ನೀಡುವುದು) | ಕೇಂದ್ರ ಸರ್ಕಾರದಿಂದ ನೀಡಿರುವ ಮಂಜೂರಾತಿ ಆದೇಶದಲ್ಲಿ ಮೂರು ವರ್ಷಗಳ ಅವಧಿಯನ್ನು ನಿಗದಿಪಡಿಸಿರುತ್ತಾರೆ. ಪ್ರಸ್ತುತ, ಯೋಜನಾ ಅನುಷ್ಠಾನಕ್ಕೆ ಅವಶ್ಯವಿರುವ ಜಮೀನನ್ನು ಕಂದಾಯ ಇಲಾಖೆಯಿಂದ ಮೀನುಗಾರಿಕೆ ಇಲಾಖೆಗೆ ಹಸ್ತಾಂತರವಾದ ನಂತರ ಸದರಿ ಯೋಜನೆಗೆ ರಾಜ್ಯ ಸರ್ಕಾರದ ಅನುಮೋದನೆ ಪಡೆದು ನಿಯಮಾನುಸಾರ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಿ ಕಾಮಗಾರಿಯನ್ನು ಪ್ರಾರಂಭಿಸಲು ಅಗತ್ಯ ಕ್ರಮವಹಿಸಲಾಗುವುದು. |

ಸಂಖ್ಯೆ: ಪಸಂಮೀ 136 ಮೀಇಇ 2018

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ವೆಂಕಟರಾವ್ ನಾಡಗೌಡ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

## ಅನುಬಂಧ

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 228**

| ಕ್ರಮ ಸಂಖ್ಯೆ | ಸರ್ವೇ ನಂ / ಹಿಸ್ಸಾ | ವಿಸ್ತೀರ್ಣ | ಹೊಳೆಗೆ ಮುಳುಗಡೆಯಾಗಿ ಲಭ್ಯವಿರುವ ಜಮೀನಿನ ವಿಸ್ತೀರ್ಣ |
|---|---|---|---|
| ಆರ್‌ಟಿಸಿ ದಾಖಲೆಯನುಸಾರ ಒಡೆತನ- ಮೀನುಗಾರಿಕೆ ಇಲಾಖೆ | | | |
| 1. | 125/5 | 1.25 | 1.02 |
| 2. | 126/1 | 0.23 | 0.23 |
| 3. | 126/2ಎ | 0.10 | 0.05 |
| 4. | 126/2ಬಿ | 0.63 | 0.48 |
| 5. | 126/3ಎ | 1.21 | 0.97 |
| 6. | 126/3ಬಿ | 1.05 | 1.04 |
| 7. | 126/4ಎ | 0.19 | 0.19 |
| 8. | 126/4ಬಿ | 1.86 | 1.86 |
| 9. | 127/1 | 0.26 | 0.26 |
| 10. | 127/2 | 6.21 | 6.21 |
| 11. | 239/2 | 0.26 | 0.00 |
| 12. | 245/2 | 0.27 | 0.27 |
| 13. | 245/3 | 0.32 | 0.32 |
| ಆರ್‌ಟಿಸಿ ದಾಖಲೆಯನುಸಾರ ಒಡೆತನ- ಸರ್ಕಾರ | | | |
| 14. | 128/3 | 0.02 | 0.02 |
| 15. | 131/2 | 0.35 | 0.35 |
| 16. | 131/3 | 0.34 | 0.34 |
| 17. | 131/4 | 0.31 | 0.31 |
| 18. | 131/8 | 0.58 | 0.58 |
| 19. | 132/5 | 0.60 | 0.57 |
| 20. | 132/9ಎ | 0.11 | 0.11 |
| 21. | 132/9ಬಿ | 0.01 | 0.01 |
| 22. | 132/9ಸಿ | 0.10 | 0.10 |
| 23. | 133/1 | 0.51 | 0.22 |

| | | | |
|---|---|---|---|
| 24. | 133/2 | 0.26 | 0.03 |
| 25. | 133/4ಎ | 0.26 | 0.24 |
| 26. | 133/4ಬಿ | 0.16 | 0.16 |
| 27. | 133/5ಎ | 0.24 | 0.11 |
| 28. | 133/5ಬಿ | 0.01 | 0.01 |
| 29. | 133/5ಸಿ | 0.21 | 0.21 |
| 30. | 134/1 | 0.59 | 0.29 |
| 31. | 134/7ಬಿ | 0.32 | 0.05 |
| 32. | 239/1ಎ | 6.88 | 0.00 |
| 33. | 245/1 | 0.09 | 0.09 |
| 34. | 195/1 | 191.37 | 26.35 |
| ಆರ್‌ಟಿಸಿ ದಾಖಲೆಯನುಸಾರ ಒಡೆತನ – ಖಾಸಗಿ | | | |
| 35. | 132/2 | 0.54 | 0.00 |
| 36. | 132/3 | 2.03 | 0.45 |
| 37. | 132/4 | 1.10 | 1.10 |
| 38. | 132/6 | 0.26 | 0.10 |
| 39. | 132/7 | 0.58 | 0.58 |

******